**ಸಾಕ್ಷಿಯನ್ನು ದಿಃ 07.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ಅಪಘಾತದ ಬಗ್ಗೆ ಠಾಣೆಯಿಂದ ಕರೆ ಮಾಡಿ ಹೇಳಿರುತ್ತಾರೆ. ಬೇರೆ ಯಾರು ಅಪಘಾತದ ಬಗ್ಗೆ ಮಾಹಿತಿ ನೀಡಿಲ್ಲ. ಅಪಘಾತದ ದಿನ ನನ್ನ ವಾಹನವನ್ನು ನನ್ನ ಸಂಬಂಧಿಕ ಪ್ರಸನ್ನ ಚಲಾಯಿಸುತ್ತಿದ್ದ. ಆ ದಿನ ಪ್ರಸನ್ನ ರವರೇ ನನ್ನಿಂದ ವಾಹನವನ್ನು ಪಡೆದುಕೊಂಡು ಹೋಗಿದ್ದಾನೆ. ಆ ದಿನ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ನಿಕರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರಸನ್ನನಿಗೆ ಡಿ.ಎಲ್ ಇತ್ತು. ಅವರಿಗೆ ಎಲ್.ಎಲ್.ಆರ್ ಇತ್ತು ಎಂದರೆ ಅದೇ ವಾಹನ ಚಾಲನ ಪರವಾನಗಿ ಎನ್ನುತ್ತಾರೆ. ಆ ದಿನ ಶೇಖರ್ ಬೈಕ್ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ವಿಮಾ ಕಂಪನಿಯ ಮೇಲೆ ಭಾಧ್ಯತೆಯನ್ನು ಹೂಡಲು ಪ್ರಸನ್ನ ವಾಹನ ಚಲಾಯಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಗೊತ್ತಿಲ್ಲದೇ ಇದ್ದರೂ ಸಹ ಪ್ರಸನ್ನ ವಾಹನ ಚಲಾಯಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.